# ಪ್ರಾರ್ಥನೆ



✽ ಭಗವಂತ ಕಲ್ಪತರು. ಬೇಡಿದ್ದೆಲ್ಲಾ ದೊರೆತುಬಿಡುತ್ತದೆ. ಆದರೆ ಕಲ್ಪತರುವಿನ ಕೆಳಗೆ ನಿಂತು ಪ್ರಾರ್ಥನೆ ಮಾಡಬೇಕು. ಆಗ ಮಾತ್ರವೇ ಪ್ರಾರ್ಥನೆ ಸಫಲಗೊಳ್ಳುತ್ತದೆ. ಆದರೆ ಒಂದು ವಿಷಯ. ಭಗವಂತ ಭಾವಗ್ರಾಹಿ. ಜನ ಏನೇನನ್ನು ಭಾವಿಸಿ ಸಾಧನೆ ಮಾಡುತ್ತಾರೊ, ಅವರಿಗೆ ಅದರಂತೆಯೇ ಫಲ ದೊರೆಯುತ್ತದೆ. ಮನಸ್ಸಿನಂತೆ ಮಹಾದೇವ.

✽ ವ್ಯಾಕುಲತೆಯೊಡನೆ ಅಳು. ವಿವೇಕ, ವೈರಾಗ್ಯ ಇವುಗಳಿಂದ ಎಲ್ಲವನ್ನೂ ತ್ಯಜಿಸಿಬಿಟ್ಟಿದ್ದೇ ಆದರೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ನಿಜವಾದ ವ್ಯಾಕುಲತೆ ಉಂಟಾಯಿತು ಎಂದರೆ, ಉನ್ಮತ್ತನ ಅವಸ್ಥೆ ಬಂದುಬಿಡುತ್ತದೆ — ಸಾಧಕ ಜ್ಞಾನಮಾರ್ಗಿಯಾದರೂ ಸರಿಯೆ, ಭಕ್ತಿಮಾರ್ಗಿಯಾದರೂ ಸರಿಯೆ.

✽ ಸಂಸಾರದಲ್ಲಿದ್ದರೂ ಯಾರು ಭಗವಂತನನ್ನು ಪ್ರಾರ್ಥಿಸುತ್ತಾನೋ ಆತ ವೀರಭಕ್ತ. ಭಗವಂತ ಭಾವಿಸುತ್ತಾನೆ: 'ಯಾರು ಸಂಸಾರವನ್ನು ತ್ಯಜಿಸಿದ್ದಾನೊ ಆತ ನನ್ನನ್ನು ಪ್ರಾರ್ಥಿಸಿಯೇ ಪ್ರಾರ್ಥಿಸುತ್ತಾನೆ. ನನ್ನ ಸೇವೆಯನ್ನು ಆತ ಮಾಡಲೇಬೇಕು. ಇದರಲ್ಲಿ ವಿಶೇಷತೆಯೇನಿದೆ? ಒಂದು ಪಕ್ಷ ಆತ ನನ್ನನ್ನು ಪ್ರಾರ್ಥಿಸದಿದ್ದರೆ ಎಲ್ಲರೂ ಆತನಿಗೆ ಛೀಮಾರಿ ಮಾಡಿಬಿಡುತ್ತಾರೆ. ಆದರೆ ಯಾರು ಸಂಸಾರದಲ್ಲಿದ್ದೂ ನನ್ನನ್ನು ಪ್ರಾರ್ಥಿಸುತ್ತಾನೊ, ಸಂಸಾರವೆಂಬ ಇಪ್ಪತ್ತು ಮಣದ ಕಲ್ಲನ್ನು ಒಂದು ಕಡೆಗೆ ತಳ್ಳಿ ನನ್ನ ದರ್ಶನ ಪಡೆಯಲು ಪ್ರಯತ್ನಿಸುತ್ತಾನೊ, ಆತನೇ ಧನ್ಯ, ಆತನೇ ಮಹಾತ್ಮ, ಆತನೇ ವೀರಪುರುಷ.'

✽ ಭಕ್ತ ಪ್ರಾರ್ಥನೆ ಮಾಡುತ್ತಾನೆ: ''ಹೇ ಭಗವತಿ. ಸಕಾಮ ಕರ್ಮ ಕಂಡರೆ ನನಗೆ ಬಹಳ ಭಯ. ಅದರಲ್ಲಿ ಕಾಮನೆ ಇದೆ. ಅದನ್ನು ಮಾಡಿದರೇ ಫಲ ಅನುಭವಿಸಬೇಕಾಗುತ್ತದೆ. ಮತ್ತೇನೆಂದರೆ ಅನಾಸಕ್ತಿಯಿಂದ ಕರ್ಮಮಾಡುವುದು ಬಹಳ ಕಠಿಣ. ಸಕಾಮ ಕರ್ಮ ಮಾಡಿದರೆ ನಿನ್ನನ್ನು ನಿಜವಾಗಿಯೂ ಮರೆತುಬಿಡುತ್ತೇನೆ. ಆದ್ದರಿಂದ ಅವು ನನಗೆ ಬೇಕಾಗಿಲ್ಲ. ನಿನ್ನ ಸಾಕ್ಷಾತ್ಕಾರ ದೊರೆಯದವರೆಗೆ, ನನ್ನ ಕರ್ಮ ದಿನದಿನಕ್ಕೂ ಕಡಮೆಯಾಗುವ ಹಾಗೆ ಮಾಡು. ಆದರೆ ಯಾವ ಕರ್ಮಗಳನ್ನು ನಾನು ಮಾಡಲೇಬೇಕಾಗಿರುವುದೋ ಅವನ್ನು ಅನಾಸಕ್ತಿಯಿಂದ ಮಾಡುವ ಹಾಗೆ ಶಕ್ತಿಯನ್ನು ಕರುಣಿಸು. ಅವನ್ನು ಮಾಡುತ್ತ ಮಾಡುತ್ತ ಮುಂದುವರಿದ ಹಾಗೆಲ್ಲ ಭಕ್ತಿಯೂ ಬೆಳೆಯುವಂತೆ ಮಾಡು. ನಿನ್ನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳದವರೆಗೆ ಹೊಸ ಕರ್ಮಗಳನ್ನು ಗಂಟುಹಾಕಿಕೊಳ್ಳಲು ನನ್ನ ಮನಸ್ಸು ಪ್ರಯತ್ನಿಸದ ಹಾಗೆ ಮಾಡು. ಆದರೆ, ನೀನು ಆದೇಶಮಾಡಿದಾಗ ಮಾತ್ರ ನಿನ್ನ ಕರ್ಮಗಳನ್ನು ಮಾಡುವೆನೇ ವಿನಾ, ಇಲ್ಲದಿದ್ದರೆ ಇಲ್ಲ.''

✽ ವ್ಯಾಕುಲನಾಗಿ ಭಗವತಿಯನ್ನು ಕರೆ. ಆಕೆಯ ದರ್ಶನ ದೊರೆತರೆ ವಿಷಯರಸ ಒಣಗಿ ಹೋಗಿಬಿಡುತ್ತದೆ; ಕಾಮಕಾಂಚನ ಆಸಕ್ತಿ ಎಲ್ಲಾ ಬಿಟ್ಟು ಹೋಗುತ್ತದೆ. ಆಕೆ ನಿನ್ನ ಸ್ವಂತ ತಾಯಿ ಎಂಬ ಬೋಧೆ ಉಂಟಾದರೆ ಈ ಕ್ಷಣವೆ ಹಾಗಾಗಿಬಿಡುತ್ತದೆ. ಆಕೆ ನಿನ್ನ ದೇವಮಾತೆ (God mother) ಅಲ್ಲ. ನಿನ್ನ ಸ್ವಂತ ಮಾತೆಯೆ. ವ್ಯಾಕುಲನಾಗಿ ಹಟಹಿಡಿದು ಆಕೆಯನ್ನು ಕೇಳು. ಮಗು ಗಾಳೀಪಟ ಕೊಂಡುಕೊಳ್ಳಲೋಸುಗ ತಾಯ ಸೆರಗನ್ನು ಹಿಡಿದು ದುಡ್ಡು ಕೇಳುತ್ತದೆ — ತಾಯಿ ಬಹುಶಃ ಆಗ ಬೇರೆ ಹೆಂಗಸರೊಡನೆ ಹರಟೆ ಹೊಡೆಯುತ್ತಿರಬೇಕು. ಮೊದಲು ಆಕೆಗೆ ಕೊಡಲು ಇಚ್ಛೆಯೇ ಇಲ್ಲ. ಹೇಳುತ್ತಾಳೆ, 'ಕೊಡೋದಿಲ್ಲ. ನಿಮ್ಮ ತಂದೆ ಬೇಡ ಅಂತ ಹೇಳಿ ಹೋಗಿದ್ದಾರೆ. ಅವರು ಬಂದರೆ ನೋಡು ಹೇಳಿಬಿಡುತ್ತೇನೆ. ಒಡನೆಯೆ ಹೋಗಿ ಗಾಳೀಪಟ ಕೊಂಡುಕೊಂಡು ಕೈಯೋ ಕಾಲೋ ಏನೊ ಒಂದು ಮಾಡಿಕೊಂಡು ಬಂದುಬಿಡುತ್ತೀಯೆ' ಎಂದು. ಆಗ ಮಗು ಅಳಲು ಆರಂಭಿಸುತ್ತದೆ. ಏನು ಮಾಡಿದರೂ ಬಿಡಲೊಲ್ಲದು. ತಾಯಿ ತನ್ನ ಗೆಳತಿಯರಿಗೆ ಹೇಳುತ್ತಾಳೆ: 'ದಯವಿಟ್ಟು ಒಂದು ಸ್ವಲ್ಪ ಕುಳಿತುಕೊಂಡಿರಿ. ಈ ಮಗುವನ್ನು ಸ್ವಲ್ಪ ಸಮಾಧಾನಪಡಿಸಿ ಬರುತ್ತೇನೆ' ಎಂದು. ಬಳಿಕ ಬೀಗದ ಕೈ ತೆಗೆದುಕೊಂಡು ಹೋಗಿ 'ಕಟಕ್', 'ಕಟಕ್' ಎಂದು ಶಬ್ದಮಾಡಿ ಪೆಟ್ಟಿಗೆಯನ್ನು ತೆರೆದು ಮೂರು ಕಾಸನ್ನು ಬಿಸಾಕುತ್ತಾಳೆ.

✽ ವ್ಯಾಕುಲ ಹೃದಯದಿಂದ ಆತನಿಗೆ ಪ್ರಾರ್ಥನೆ ಸಲ್ಲಿಸು; ಆತನಿಗಾಗಿ ಅಳು. ಆಗ ಚಿತ್ತಶುದ್ಧಿ ಉಂಟಾಗುತ್ತದೆ. ನಿರ್ಮಲವಾದ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ನೋಡಬಹುದು. ಭಕ್ತನ 'ನಾನು' ಎಂಬ ರೂಪಿನ ಕನ್ನಡಿಯಲ್ಲಿ ಸಗುಣ ಬ್ರಹ್ಮನ, ಆದ್ಯಾಶಕ್ತಿಯ ದರ್ಶನ ದೊರೆಯುತ್ತದೆ. ಆದರೆ ಕನ್ನಡಿಯನ್ನು ಬಹಳ ಚೆನ್ನಾಗಿ ಒರೆಸಬೇಕು. ಕೊಳೆ ಕುಳಿತಿದ್ದರೆ ಸರಿಯಾದ ಪ್ರತಿಬಿಂಬ ಬೀಳದು.

✽ ಪಶುಭಾವ ನಾಶವಾಗದೆ ಇದ್ದರೆ ಹೊರತು ಭಗವಂತನ ಆನಂದದ ಸವಿಯನ್ನು ಸವಿಯಲಾಗುವುದಿಲ್ಲ. ಪಶುಭಾವ ಹೃದಯವನ್ನು ಬಿಟ್ಟು ತೊಲಗಿಹೋಗುವಂತೆ ಭಗವಂತನಿಗೆ ಪ್ರಾರ್ಥನೆ ಮಾಡಬೇಕು; ವ್ಯಾಕುಲಚಿತ್ತದಿಂದ ಪ್ರಾರ್ಥನೆ ಮಾಡಬೇಕು. ಆತ ಅಂತರ್ಯಾಮಿ, ನಾವು ಹೃತ್ಪೂರ್ವಕವಾಗಿ ಪ್ರಾರ್ಥನೆ ಮಾಡಿದ್ದೇ ಆದರೆ ಆತ ಕೇಳಿಯೇ ಕೇಳುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ